**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.873-2017**

ಪಿ.ಡಬ್ಲ್ಯೂ:2

ಸಿ.ಡಬ್ಲ್ಯೂ:2

ಹೆಸರು ಃ ಗುಳ್ಳಮ್ಮ

ಗಂಡನ ಹೆಸರು ಃ ನಾಗಪ್ಪ

ವಯಸ್ಸು ಃ 65 ವರ್ಷ

ಉದ್ಯೋಗ ಃ ಕೂಲಿಕೆಲಸ,

ವಾಸಸ್ಥಳ ಃ ಬಂಕನಕಟ್ಟೆ

**ದಿನಾಂಕ.06-03-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ ರವರಿಂದ**

1. ಚಾಸಾ-1 ನನ್ನ ಮಗಳು. 2ನೇ ಆರೋಪಿ ನನ್ನ ಗಂಡ. 3ನೇ ಆರೋಪಿ 2ನೇ ಆರೋಪಿಯ 2ನೇ ಹೆಂಡತಿ. ಈಗ್ಯೆ 3 ವರ್ಷಗಳ ಹಿಂದೆ ನಾನು ಮತ್ತು ಚಾಸಾ-1 ರವರು ನಮ್ಮ ಮನೆಯಲ್ಲಿ ಇದ್ದಾಗ ಸಂಜೆ ಸುಮಾರು 5.30 ಗಂಟೆ ಸಮಯದಲ್ಲಿ ನಮ್ಮ ಮನೆಯ ಹಿಂಭಾಗದಲ್ಲಿ ಆರೋಪಿತರು ಶೌಚಾಲಯವನ್ನು ಕಟ್ಟಿಸಲು ಮರಳು ಕಲ್ಲುಗಳನ್ನು ನಮ್ಮ ಖಾಲಿ ಜಾಗದಲ್ಲಿ ಹಾಕಿದ್ದು ಅದನ್ನು ತೆಗೆದುಕೊಳ್ಳುವಂತೆ ಆರೋಪಿತರಿಗೆ ಚಾಸಾ-1 ರವರು ಹೇಳಿದಾಗ ಆರೋಪಿತರು ನನಗೆ ಮತ್ತು ಚಾಸಾ-1 ರವರಿಗೆ ಕೈಗಳಿಂದ ಹಲ್ಲೆ ಮಾಡಿರುತ್ತಾರೆ. ನಂತರ ನಮ್ಮ ಮನೆಯಲ್ಲಿ ಇದ್ದ ಬಿಸಿ ಸಾಂಬಾರು ಪಾತ್ರೆಯ ಮೇಲೆ ಚಾಸಾ-1 ರವರನ್ನು ನೂಕಿ ಗಾಯಗೊಳಿಸಿರುತ್ತಾರೆ. ಆರೋಪಿತರು ನನಗೆ ಮತ್ತು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆರೋಪಿತರು ನಮಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ. ದಿನ ನಮ್ಮ ಮನೆಯಲ್ಲಿ ಇದ್ದ ಸಾಂಬಾರು ಪಾತ್ರೆ ಹಾಗೂ ದೊಣ್ಣೆಯನ್ನು ಸಾಕ್ಷಿ ನೋಡಿ

ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ-1 ಮತ್ತು 2 ಎಂದು ಗುರುತಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲು : ಆರೋಪಿ ಪರ ವಕೀಲರು** ಶ್ರೀ.ಇ.ಪಿ.ಪಿ ವಕೀಲರಿಂದ:-

2. ನಾವು ಮತ್ತು ಆರೋಪಿತರು ನಡುವೆ ಬಹಳ ವರ್ಷಗಳಿಂದ ವಿಶ್ವಾಸದಿಂದ ಇರುವುದಿಲ್ಲ ಎಂದರೆ ನಿಜ. ಆದ ಕಾರಣ ನಾವು ಒಂದು ಕಡೆ ಆರೋಪಿತರು ಒಂದು ಕಡೆ ಇರುತ್ತೇವೆ ಎಂದರೆ ನಿಜ. ಯಾವುದೇ ಗಲಾಟೆಯಾಗದಿದ್ದರೂ ಸಹ ಉದ್ದೇಶಪೂರ್ವಕವಾಗಿ ಸುಳ್ಳು ದೂರು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಪಾತ್ರೆಗಳು ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಇರುತ್ತವೆ ಎಂದರೆ ನಿಜ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.